ಯಶಸ್ವಿಯಾಗಿದ್ದು ಕಡಿಮೆಯೇ ಎನ್ನುವುದು ಅವರ ಗ್ರಹಿಕೆ. ಆದರೂ ಗಿರೀಶ ಕಾರ್ನಾಡ ಮತ್ತು ಶಿವರಾಮ ಕಾರಂತರು ಬರೆದ ಸ್ಕ್ರಿಪ್ಟ್ ತುಂಬ ಚೆನ್ನಾಗಿದೆ ಎನ್ನುವ ಅವರು, ಆ ಇಬ್ಬರೂ ಪ್ರದರ್ಶನ ಕಲೆಗಳ ಹಿನ್ನೆಲೆಯಿಂದ ಬಂದವರು ಎಂಬುದನ್ನೂ ಗುರ್ತಿಸುತ್ತಾರೆ. ಹಾಗೆಯೇ ಎಂ.ಟಿ. ವಾಸುದೇವನ್ ನಾಯರ್, ವಿಜಯ್ ತೆಂಡೂಲ್ಕರ್‌ರ ಸ್ಕ್ರಿಪ್ಟ್‌ಗಳು ಗಟ್ಟಿಯಾಗಿರುತ್ತವೆ ಎನ್ನುತ್ತಾರೆ.

ಇಷ್ಟೆಲ್ಲ ಕಷ್ಟಪಟ್ಟು ಒಂದು ಸಿನಿಮಾ ಮಾಡಿದರೆ ಅದನ್ನು ಗುರ್ತಿಸುವ ಪ್ರೇಕ್ಷಕವರ್ಗವೊಂದು ಕನ್ನಡದಲ್ಲಿ ಉಳಿದಿದೆಯೇ? ಎಂಬ ಆತಂಕವನ್ನೂ ಪೈ ತೋಡಿಕೊಂಡರು. ಈ ಬೇಸರ ಕಾಸರವಳ್ಳಿ ಅವರದೂ ಆಗಿತ್ತು.

'ಬೆಂಗಳೂರು ಚಿತ್ರೋತ್ಸವ ನಡೆಯುತ್ತದೆ. ಅಲ್ಲಲ್ಲಿ ಒಬ್ಬೊಬ್ಬ ನಿರ್ದೇಶಕರ ಎಲ್ಲ ಸಿನಿಮಾಗಳನ್ನು ತೋರಿಸುವ ಪ್ರಯತ್ನಗಳೂ ಕೆಲವೆಡೆ ನಡೆಯುತ್ತಿವೆ. ಇಷ್ಟೆಲ್ಲ ಆಗಿಯೂ ಸಹೃದಯ ಪ್ರೇಕ್ಷಕ ವರ್ಗವೊಂದನನ್ನು ರೂಪಿಸುವುದು ಯಾಕೆ ಸಾಧ್ಯವಾಗಿಲ್ಲ' ಎಂಬ ಪ್ರಶ್ನೆ ಪೈ ಅವರದಾಗಿತ್ತು.

'ಒಂದು ಚಿತ್ರೋತ್ಸವ ಯಾವ ಮ್ಯಾಜಿಕ್ ಅನ್ನೂ ಮಾಡಲು ಸಾಧ್ಯವಿಲ್ಲ. ಆದರೆ ವ್ಯಾಪಕವಾಗಿ ಸಿನಿಮಾ ಸಂಸ್ಕೃತಿ ಬೆಳೆಯಬೇಕಾಗಿತ್ತು. ಬೆಳೆಯಲಿಲ್ಲ ಅನ್ನುವುದಂತೂ ನಿಜ. ಯಾಕೆ ಬೆಳೆಯಲಿಲ್ಲ ಎನ್ನುವುದು ನನಗೂ ಗೊತ್ತಿಲ್ಲ. ಎಪ್ಪತ್ತರ ದಶಕದಲ್ಲಿ ಕೇರಳದಲ್ಲಿ ಎಂಬತ್ತು ಫಿಲ್ಮ್ ಸೊಸೈಟಿ ಇದ್ದಾಗ ನಮ್ಮಲ್ಲಿ ಎಂಟ್ಹತ್ತು ಫಿಲ್ಮ್ ಸೊಸೈಟಿಗಳಿದ್ದವು. ಈಗಲೂ ಕೇರಳದಲ್ಲಿ ತುಂಬಾ ಫಿಲ್ಮ್ ಸೊಸೈಟಿಗಳಿವೆ. ಆದರೆ ನಮ್ಮಲ್ಲಿ ಹೆಸರಿಗೆ ಮಾತ್ರ ಇವೆ. ಕ್ರಿಯಾತ್ಮಕವಾಗಿರುವುದು ತುಂಬಾ ಕಮ್ಮಿ. ಹಾಗೆಯೇ ಸಿನಿಮಾ ಕುರಿತ ಸಾಹಿತ್ಯವೂ ನಮ್ಮಲ್ಲಿ ಬೆಳೆಯಲಿಲ್ಲ. ಈಗಲೂ ನಾನು ಬೇರೆ ಬೇರೆ ಕಡೆಗಳಲ್ಲಿ ಹೋದಾಗ ಸಿನಿಮಾ ಮಾಧ್ಯಮದ ಕುರಿತು, ಅದರ ಈಡಿಯಂ ಕುರಿತು ನನಗೆ ಮತ್ತೆ ಮತ್ತೆ ಕೇಳಲಾಗುವ ಪ್ರಶ್ನೆಗಳು ಕನ್ನಡ ನೆಲದಲ್ಲಿ ಯಾರೂ ಯಾಕೆ ಕೇಳುತ್ತಿಲ್ಲ ಎಂದು ನನ್ನನ್ನು ಕಾಡುತ್ತಿರುತ್ತದೆ. ನಾವು ಈಗಲೂ ಸಿನಿಮಾವನ್ನು ಕಥೆ ಹೇಳುವ ಮಾಧ್ಯಮವನ್ನಾಗಿಯಷ್ಟೇ ನೋಡುತ್ತಿದ್ದೇವೆಯೇ ಹೊರತು ಈಗಲೂ ಅದನ್ನೊಂದು ಮಾಧ್ಯಮವಾಗಿ ವಿಶ್ಲೇಷಿಸುತ್ತಿಲ್ಲ. ಫಿಲ್ಮ್ ಅಕಾಡೆಮಿಶಿಯನ್ ಅಂತೀವಲ್ಲಾ, ನಮ್ಮ ಕನ್ನಡದಲ್ಲಿ ಅಂಥವರು ಹುಟ್ಟಿಕೊಳ್ಳಲೇ ಇಲ್ಲ. ಇರುವವರೂ ಬೇರೆ ಭಾಷೆಯ ಸಿನಿಮಾಗಳ ಬಗ್ಗೆ ಬರೆಯುತ್ತಾರೆಯೇ ಹೊರತು ಕನ್ನಡದಲ್ಲಿ ಆಗುತ್ತಿರುವ ಪ್ರಯೋಗಗಳ ಬಗ್ಗೆ ಆಸಕ್ತಿ ತೋರುವುದೇ ಇಲ್ಲ' ಎಂದು ಕೊಂಚ ಬೇಸರದಿಂದಲೇ ಹೇಳಿದರು ಕಾಸರವಳ್ಳಿ.

ಈ ಚರ್ಚೆ ಇಲ್ಲಿಯೇ ಮುಗಿಯುವಂಥದ್ದಾಗಿರಲಿಲ್ಲ. ಕಲೆ–ಸಾಹಿತ್ಯ ಎರಡರಲ್ಲಿಯೂ ಸಾಕಷ್ಟು ಒಳ್ಳೆಯ ರುಚಿ–ಅಭಿರುಚಿಯನ್ನು ಹೊಂದಿರುವ, ಅಷ್ಟೇ ಒಳ್ಳೆಯ ಕೃತಿಗಳನ್ನೂ ಕೊಟ್ಟಿರುವ ಇಬ್ಬರು ಹಿರಿಯರ ನಡುವಿನ ಚರ್ಚೆಯ ಆಳ–ಅಗಲಗಳು ಪುಟ್ಟ ಕಣ್ಣುಗಳ ರೆಪ್ಪೆಗೋಡೆಗಳ ಗಡಿಯನ್ನೂ ದಾಟಿ ವಿಸ್ತರಿಸಿಕೊಳ್ಳುತ್ತಲೇ ಇತ್ತು. ಹಾಗೆ ವಿಸ್ತರಿಸಿಕೊಂಡಷ್ಟೂ ಅದು ತನ್ನ ತೀವ್ರತೆಯನ್ನೂ ಕೌತುಕವನ್ನೂ ಹೆಚ್ಚಿಸುತ್ತಿತ್ತು.

ಅಷ್ಟರಲ್ಲಿ ಗಿರೀಶರ ಮಗಳು ಅನನ್ಯಾ ಕಾಫಿ ಕಪ್‌ಗಳನ್ನು ಕೈಗೆ ಹಿಡಿಸಿದರು. ಅದನ್ನೊಂದು ಗುಟುಕು ಬಾಯಿಗಿಳಿಸಿಕೊಂಡ ಕಾಸರವಳ್ಳಿ, 'ಕೊನೆಗೂ ಅಭಿರುಚಿ ಎನ್ನುವುದು ಅಭ್ಯಾಸದಿಂದ ರೂಢಿಸಿಕೊಳ್ಳಬೇಕಾಗಿದ್ದು' ಎಂದರು. ಅವರ ಮಾತು ಅದುವರೆಗಿನ ಚರ್ಚೆಯ ಹದಕ್ಕೂ ಕೈಲಿರುವ ಕಾಫಿಯ ಸ್ವಾದಕ್ಕೂ ಒಟ್ಟೊಟ್ಟಿಗೇ ಅನ್ವಯವಾಗುವಂತಿತ್ತು.

ನಿರೂಪಣೆ: ಪದ್ಮನಾಭ ಭಟ್